ದಿನಾಂಕ 02-08-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು ವಾದಿಯ ಪರ ಶ್ರಿ ಬಿ.ಸಿ.ಸಿ., ವಕೀಲರಿಂದಃ-</u>

ನಾನು ಡಿಪ್ಲೊಮಾ ಕಲಿತಿದ್ದೇನೆ. ನಾನು ಈಗ ಸಿವಿಲ್ ಕಂಟ್ರಾಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ನಾನು ಹೇಳಿರುವ ನನ್ನ ವಿಳಾಸ ನನ್ನ ಖಾಯಂ ವಿಳಾಸ ಅಲ್ಲ, ತಾತ್ಕಾಲಿಕ ವಿಳಾಸ. ಸದರಿ ವಿಳಾಸದಲ್ಲಿ 2006 ರಿಂದ 2012ರವರೆಗೆ ವಾಸವಿದ್ದೆ. ಈಗ ನಾನು ಸದರಿ ವಿಳಾಸದಲ್ಲಿ ವಾಸವಿಲ್ಲ ಎಂದರೆ ಸರಿ. ಈಗ ನನ್ನ ಪ್ರಸ್ತುತ ವಿಳಾಸ ನಂ.21/ಎ, ಅಪ್ರಮೇಯ ವೃಂದ ರೆಸಿಡೆನ್ಸಿಯಲ್ ಲೇಔಟ್, ಕೆಂಗೇರಿ ಉತ್ತರಹಳ್ಳಿ ಮುಖ್ಯ ರಸ್ತೆ, ಬೆಂಗಳೂರು-60. ಈ ವಿಳಾಸಕ್ಕೆ ನನ್ನ ತಾಯಿ, ನನ್ನ ಅಣ್ಣ ಎಲ್ಲ ಶಿಫ್ಟ್ ಆಗಿದ್ದೇವೆ. ನನ್ನ ತಂದೆ ಈಗ ಜೀವಂತವಿಲ್ಲ. ಅವರು 2022ರಲ್ಲಿ ತೀರಿಕೊಂಡರು. ನನ್ನ ತಂದೆಗೆ ವಾರಸುದಾರರಾಗಿ ನನ್ನ ತಾಯಿ, ನಾನು, ನನ್ನ ಅಣ್ಣ ನಾಗಣ್ಣನ್ ರವರು ಮಾತ್ರ, ಬೇರೆ ಯಾರೂ ವಾರಸುದಾರರಿಲ್ಲ.

2. 5ನೇ ಪ್ರತಿವಾದಿ ನನ್ನ ತಂದೆಗೆ 2002-03 ರಿಂದ ಪರಿಚಯ. 5ನೇ ಪ್ರತಿವಾದಿ ಏನು ಬ್ಯುಸಿನೆಸ್ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. 6ನೇ ಪ್ರತಿವಾದಿ ಚಂದ್ರಶೇಖರ್ ನನಗೆ, ನಮ್ಮ ಮನೆಯವರಿಗೆ ಪರಿಚಯವಿಲ್ಲ.ದಾವಾ ಸ್ವತ್ತು ಮೂಲತಃ ಚಿಕ್ಕರಾಮಯ್ಯರವರಿಗೆ ಸೇರಿದ್ದು ಎಂದರೆ ಸರಿ. ಅವರಿಂದ ದಾವಾ ಸ್ವತ್ತನ್ನು ನನ್ನ ತಾಯಿ ಒಬ್ಬರೇ ದಿನಾಂಕ 21.12.1986ರಲ್ಲಿ ಖರೀದಿ ಮಾಡಿದರು ಎಂದರೆ ಸರಿ. ನನ್ನ ತಾಯಿ ಗೃಹಿಣಿಯಾಗಿದ್ದರು. ಆಸ್ತಿಯನ್ನು ನನ್ನ ತಂದೆಯ ದುಡಿಮೆಯಿಂದ ನನ್ನ ತಾಯಿಯ ಹೆಸರಿಗೆ ಖರೀದಿ ಮಾಡಿದ್ದು. ದಾವಾ ಸರ್ವೇ ನಂ.199ರಲ್ಲಿ 3 ಎಕರೆ 35 ಗುಂಟೆಯಲ್ಲಿ 20 ಗುಂಟೆ ಖರಾಬು ಸೇರಿದೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೇ ನಂ.198, ಪಶ್ಚಿಮಕ್ಕೆ ಮರೆತುಹೋಗಿದೆ, ದಕ್ಷಿಣಕ್ಕೆ ಸರ್ಕಾರಿ ರಸ್ತೆ ಮತ್ತು ಉತ್ತರಕ್ಕೆ ಮರೆತಿದ್ದೇನೆ. ದಾವಾ ಸ್ವತ್ತಿನ ಉತ್ತರಕ್ಕೆ ಸರ್ವೇ ನಂ.189 ಎಂದರೆ ಸರಿ, ದಾವಾ ಸ್ವತ್ತಿನ

ಪಶ್ಚಿಮಕ್ಕೆ ಸರ್ಕಾರಿ ಗೋಮಾಳ ಎಂದರೆ ಸರಿ.

3. ದಾವಾ ಸ್ವತ್ತಿನ ಉತ್ತರಕ್ಕೆ ಇರುವ ಸ್ವತ್ತು ವಾದಿ ಮತ್ತು ವಾದಿಯ ಕುಟುಂಬಕ್ಕೆ ಸೇರಿದ್ದು ಎಂದರೆ ಸರಿ. ಅದರ ಸರ್ವೇ ನಂ.189 ಎಂದರೆ ಸರಿ. ಸರ್ವೇ ನಂ.189 ಐದಾರು ಪೋಡಿಗಳಾಗಿದೆ ಎಂದರೆ ಗೊತ್ತಿಲ್ಲ. ಅವುಗಳಲ್ಲಿ ಎರಡರಿಂದ ಮೂರು ಪೋಡಿಗಳು ವಾದಿಗೆ ಸೇರಿದೆ ಎಂದರೆ ಗೊತ್ತಿದೆ. ಸರ್ವೇ ನಂ.199ರ ಆಸುಪಾಸಿನಲ್ಲಿ ವಾದಿಯವರು ಸುಮಾರು 30 ರಿಂದ 40 ಎಕರೆ ಜಮೀನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಅವುಗಳ ಸರ್ವೇ ನಂಬರ್ ಗೊತ್ತಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಅಭಿವೃದ್ಧಿಗೊಳಿಸಿ ಲೇಔಟ್ ಮಾಡಿದ್ದಾರೆ ಎಂದರೆ ಇತ್ತೀಚೆಗೆ ಮಾಡಿದ್ದಾರೆ. ದಾವಾ ಸ್ವತ್ತನ್ನು ನಾನು ಕೊನೆಯ ಬಾರಿಗೆ ನೋಡಿದ್ದು ಈಗ್ಗೆ ಮೂರು-ನಾಲ್ಕು ತಿಂಗಳ ಹಿಂದೆ. ದಾವಾ ಸ್ವತ್ತಿನ ಆಸುಪಾಸಿನಲ್ಲಿ 2012ರಲ್ಲೇ ಲೇಔಟ್ ಆಗಿತ್ತು ಎಂದರೆ ಸಾಕ್ಷಿಯು ಸ್ವಲ್ಪ ಮುಂದೆ ಆಗಿತ್ತು ಎಂದು ನುಡಿಯುತ್ತಾರೆ.

4. ದಾವಾ ಸ್ವತ್ತನ್ನು ದಿನಾಂಕ 01.01.2011ರಂದು ವಾದಿ ನಮ್ಮಿಂದ ಖರೀದಿ ಮಾಡಿದರು ಎಂದರೆ ಸರಿ. ಕ್ರಯಪತ್ರಕ್ಕೆ ನಾನು, ನನ್ನ ಅಣ್ಣ, ಹಾಗೂ ನಮ್ಮ ಇಬ್ಬರು ಮೈನರ್ ಮಕ್ಕಳ ಪರವಾಗಿ ಸಹಿ ಹಾಕಿದ್ದೇವೆ ಎಂದರೆ ಸರಿ. ಕ್ರಯಪತ್ರ ಆಗುವ ಮೂರು-ನಾಲ್ಕು ತಿಂಗಳ ಮುಂಚೆ ನಂಜಪ್ಪರವರನ್ನು ಭೇಟಿ ಮಾಡಿದ್ದೆವು. ನಂಜಪ್ಪ ಹಾಗೂ ಅವರ ಹಿರಿಯ ಮಗ ಹರೀಶ್ ಪೂನಂ ಅಲಿಯಾಸ್ ಹರೀಶ್ ಕುಮಾರನ್ನು ಭೇಟಿ ಮಾಡಿದ್ದೆವು. ಕ್ರಯದ ಮಾತುಕತೆಯನ್ನು ಹರೀಶ್ ಕುಮಾರ್ ರವರೇ ಮಾತನಾಡಿದ್ದು ಎಂದರೆ ಸಾಕ್ಷಿಯು ಹರೀಶ್ ಕುಮಾರ್ ರವರೇ, ಆದರೆ ನಂಜಪ್ಪರವರು ಸಹ ಜೊತೆಯಲ್ಲಿದ್ದರು ಎಂದು ನುಡಿಯುತ್ತಾರೆ. ಮಾತುಕತೆ ಮಾಡಿದ್ದು ಬಿಡದಿಯಲ್ಲಿ. ಮಾತುಕತೆಗೆ ನನ್ನ ತಂದೆ ಮಾತ್ರ ಭೇಟಿ ಮಾಡುತ್ತಿದ್ದರು. ನಾನು ಮಾತುಕತೆಗೆ ಒಂದರಿಂದ ಎರಡು ಬಾರಿ ಹೋಗಿದ್ದೆ. ಕ್ರಯದ ಮೊತ್ತ ನಿಗದಿಯಾಗುವಾಗ ನಾನು ಹೋಗಿದ್ದೆ. ಆ ಕಾಲಕ್ಕೆ ನಾನು, ನನ್ನ ತಂದೆ, ಹರೀಶ್

ಪೂನಂ ರವರ ಅಣ್ಣ, ನಂಜಪ್ಪ ಹಾಗೂ ಹರೀಶ್ ಪೂನಂ ಇದ್ದರು. ಸಾಕ್ಷಿದಾರರು ಸಹ ಇದ್ದರು. ಅವರು ಲಕ್ಷ್ಮೀನಾರಾಯಣ್. ಲಕ್ಷ್ಮೀನಾರಾಯಣ್ ರವರ ಕಛೇರಿಯ ಸಿಬ್ಬಂದಿ ಲತಾ ಎಂಬುವವರು ಸಹ ಇದ್ದರು ಎಂದರೆ ಮರೆತಿದ್ದೇನೆ.

5. ನಾವು ಬರೆದುಕೊಟ್ಟ ಕ್ರಯಪತ್ರ ನಿಪಿ-1 ಎಂದರೆ ಸರಿ. ನಿಪಿ-1ರಲ್ಲಿ ನನ್ನ, ನನ್ನ ತಂದೆ, ತಾಯಿ, ನನ್ನ ಅಣ್ಣ ರವರ ಸಹಿಗಳಿವೆ ಎಂದರೆ ಸರಿ. ನಿಪಿ-1 ಕ್ರಯಪತ್ರಕ್ಕೆ ಲಕ್ಷ್ಮೀನಾರಾಯಣ್ ಮತ್ತು ಲತಾ ಎಂಬುವವರು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ ಎಂದರೆ ಸರಿ. ಕ್ರಯದ ಮಾತುಕತೆಗೆ ಸದರಿ ಇಬ್ಬರು ಸಾಕ್ಷಿದಾರರು ಇದ್ದರು ಎಂದರೆ ಸಾಕ್ಷಿಯು ಒಂದು ಬಾರಿ ಇದ್ದರು ಎಂದು ನುಡಿಯುತ್ತಾರೆ. ಕ್ರಯದ ಮಾತುಕತೆಯ ಕಾಲಕ್ಕೆ ವೆಂಕಟೇಶ್ ಎಂಬುವವರಿಗೆ ಅಗ್ರಿಮೆಂಟ್ ಮಾಡಿದ್ದೇವೆ ಎಂದು ವಾದಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಮೊದಲ ಬಾರಿಗೆ ತಿಳಿಸಿದ್ದೆವು ಎಂದು ನುಡಿಯುತ್ತಾರೆ. ವೆಂಕಟೇಶ್‌ರವರಿಗೆ ಜಿ.ಪಿ.ಎ ಹಾಗೂ ಅಗ್ರಿಮೆಂಟ್ ಮಾಡಿಕೊಟ್ಟಿರುವ ವಿಚಾರವನ್ನು ನಾವು ವಾದಿಗೆ ಯಾವತ್ತೂ ತಿಳಿಸಿಲ್ಲ ಎಂದರೆ ಸರಿಯಲ್ಲ. ವಾದಿಗೆ ತಿಳಿಸಿದ್ದೇವೆ ಎಂದು ಸಾಬೀತುಪಡಿಸಲು ಲಕ್ಷ್ಮೀನಾರಾಯಣ್ ಮತ್ತು ಲತಾರವರನ್ನು ವಿಚಾರಣೆ ಮಾಡಿಸುತ್ತೀರಾ ಎಂದರೆ ಸಾಕ್ಷಿಯು ಲತಾರವರು ಪರಿಚಯವಿಲ್ಲ, ಲಕ್ಷ್ಮೀನಾರಾಯಣ್ ರವರನ್ನು ವಿಚಾರಣೆ ಮಾಡುತ್ತೇವೆ ಎಂದು ನುಡಿಯುತ್ತಾರೆ.

6. ದಿನಾಂಕ 01.01.2011ಕ್ಕೂ ಮುಂಚೆ ವಾದಿ ಹಾಗೂ ನಮ್ಮ ನಡುವೆ ಯಾವುದೇ ಅಗ್ರಿಮೆಂಟ್ ಆಗಿರಲಿಲ್ಲ. ಕ್ರಯದ ಹಣ 50 ಲಕ್ಷ ಪೈಕಿ 46 ಲಕ್ಷ ಚೆಕ್ ಮುಖಾಂತರ ಪಾವತಿಸಿದ್ದಾರೆ ಎಂದರೆ ಸರಿ. 4 ಲಕ್ಷ ಮಾತ್ರ ನಗದಾಗಿ ಕೊಟ್ಟಿದ್ದಾರೆ ಎಂದರೆ ಸರಿ. ಕ್ರಯದ ಹಣ 50 ಲಕ್ಷ ನಮ್ಮ ಕುಟುಂಬಕ್ಕೆ ಬಂದಿದೆ ಎಂದರೆ ಸರಿ. ದಿನಾಂಕ 01.01.2011ಕ್ಕೆ ಕ್ರಯಪತ್ರ ನೋಂದಣಿ ಮಾಡುತ್ತಿದ್ದೇವೆ, ಸಬ್-ರಿಜಿಸ್ಟ್ರಾರ್ ಕಛೇರಿಗೆ ಹೋಗುತ್ತಿದ್ದೇವೆ ಎಂದು ವೆಂಕಟೇಶ್‌ರವರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಅವರು ಆ ಕಾಲಕ್ಕೆ ನಮಗೆ ಸಿಗಲಿಲ್ಲ ಎಂದು

ನುಡಿಯುತ್ತಾರೆ. ಕ್ರಯಪತ್ರಕ್ಕೆ ವೆಂಕಟೇಶ್‌ರವರು ಸಮ್ಮತಿ ಸಾಕ್ಷಿಯಾಗಿ ಸಹಿ ಹಾಕಿದಾರೆ ಮಾತ್ರ ನಾವು ಕ್ರಯಪತ್ರ ಬರೆದುಕೊಡುವುದು ಎಂದು ವಾದಿಗೆ ಹೇಳಿದ್ದೀರಾ ಎಂದರೆ ಹೇಳಿದ್ದೇವೆ. ದಿನಾಂಕ 01.01.2011ರಂದು ವೆಂಕಟೇಶ್ ರವರು ಸಬ್-ರಿಜಿಸ್ಟ್ರಾರ್ ಕಛೇರಿಗೆ ಬಂದರೆ ಮಾತ್ರ ನಾವು ಕ್ರಯಪತ್ರ ಬರೆದುಕೊಡುವುದು ಎಂದು ವಾದಿಗೆ ಹೇಳಿದ್ದೀರಾ ಎಂದರೆ ಸಾಕ್ಷಿಯು ಹೇಳಿದೆವು, ನಾವು ಮಾತನಾಡಿದ್ದೇವೆ, ದಾಖಲೆ ರಿಜಿಸ್ಟರ್ ಆಗಿದೆ ಎಂದು ಹೇಳಿದರು ಎಂದು ನುಡಿಯುತ್ತಾರೆ. ವಾದಿಗೆ ಕ್ರಯಪತ್ರ ಬರೆದುಕೊಟ್ಟು 50 ಲಕ್ಷ ಹಣ ತೆಗೆದುಕೊಂಡಿದ್ದೇವೆ, ಅದೇ ರೀತಿ 5ನೇ ಪ್ರತಿವಾದಿಗೆ ಅಗ್ರಿಮೆಂಟ್ ಬರೆದುಕೊಟ್ಟು 47 ಲಕ್ಷ ಹಣ ವೆಂಕಟೇಶ್‌ರವರಿಂದ ಪಡೆದುಕೊಂಡಿದ್ದೇವೆ ಎಂದರೆ ಸರಿ. ವಾದಿ ಕ್ರಯಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದಾಗ ನಾವು ತಕರಾರು ಸಲ್ಲಿಸಿಲ್ಲ. ವಾದಿಗೆ ಕ್ರಯಪತ್ರ ನೋಂದಣಿಯಾದ ಎಷ್ಟು ದಿವಸಕ್ಕೆ ವೆಂಕಟೇಶ್ ರವರು ನಿಮಗೆ ಸಿಕ್ಕಿದರು ಎಂದರೆ ಸಾಕ್ಷಿಯು ಈ ಕೇಸು ದಾಖಲಾದ ನಂತರದಲ್ಲಿ ಎಂದು ನುಡಿಯುತ್ತಾರೆ.

7. ಚಿಕ್ಕರಾಮಯ್ಯರವರಿಂದ ನಮ್ಮ ತಾಯಿಗೆ ಆದ ಕ್ರಯಪತ್ರ ಕಳೆದು ಹೋಗಿದೆ. ನಿಡಿ-1ರಲ್ಲಿ ಪದ್ಮಾವತಿ ಎಂದು ಇರುವ ಸಹಿ ನನ್ನ ತಾಯಿಯ ಸಹಿ. ನಿಡಿ-1ರ ಸ್ಟ್ಯಾಂಪ್ ಪೇಪರ್ ಖರೀದಿ ಮಾಡಿರುವವರು ವೆಂಕಟೇಶ್ ಎಂಬುವವರು ಎಂದರೆ ಸರಿ. ನಿಡಿ-1ಕ್ಕೆ ಶಿವಲಿಂಗಯ್ಯ ಮತ್ತು ನರಸಿಂಹಯ್ಯ ಸಾಕ್ಷಿಯಾಗಿ ಸಹಿ ಹಾಕಿದ್ದಾರೆ ಎಂದರೆ ಸರಿ. ಅವರು ನನಗೆ ಪರಿಚಯವಿಲ್ಲ. ನಿಡಿ-1 ನೋಂದಣಿಯಾಗಿಲ್ಲ ಎಂದರೆ ಸರಿ. ನಿಡಿ-1ರಲ್ಲಿರುವ ಚಕ್ಕುಬಂದಿ ಸ್ಥಳದಲ್ಲಿರುವ ಚಕ್ಕುಬಂದಿಗೆ ಹೋಲಿಕೆಯಾಗುವುದಿಲ್ಲ ಎಂದರೆ ಸರಿಯಲ್ಲ. ನಿಡಿ-1ರಲ್ಲಿ ಉತ್ತರ ಹಾಗೂ ಪೂರ್ವಕ್ಕೆ ನಮೂದಿಸಿರುವ ಚಕ್ಕುಬಂದಿ 2007ರಲ್ಲಿ ಇರಲಿಲ್ಲ ಎಂದರೆ ಸಾಕ್ಷಿಯು ಸರ್ವೆ ನಂಬರ್ ಸರಿಯಾಗಿರುತ್ತದೆ, ಮಾಲೀಕರು ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ವೆಂಕಟೇಶ್‌ರವರಿಗೆ ಅಗ್ರಿಮೆಂಟ್ ಸಹ ಮಾಡಿಕೊಟ್ಟೆವು. ಜಿ.ಪಿ.ಎ. ಬೇರೆ ದಿನಾಂಕ, ಅಗ್ರಿಮೆಂಟ್ ಬೇರೆ

ದಿನಾಂಕ ಮಾಡಿರುವುದು ಎಂದರೆ ಸರಿ. 5ನೇ ಪ್ರತಿವಾದಿ ವೆಂಕಟೇಶ್‌ರವರು 47 ಲಕ್ಷ ರೂಪಾಯಿಗಳನ್ನು ನಗದಾಗಿಯೇ ಬೇರೆ ಬೇರೆ ದಿನಾಂಕ ಕೊಟ್ಟರು.

8. ನಿಡಿ-2ರ ಸಾಕ್ಷಿ ಲಕ್ಷ್ಮೀನಾರಾಯಣ್ ರವರು ನಿಪಿ-1 ಕ್ರಯಪತ್ರದಲ್ಲಿರುವ ಸಾಕ್ಷಿ ಲಕ್ಷ್ಮೀನಾರಾಯಣ್ ರವರೇ ಎಂದರೆ ಸರಿ. ನಿಡಿ-2ರ ಸಾಕ್ಷಿ ಮಹೇಶ್ ನನಗೆ ಪರಿಚಯವಿಲ್ಲ. ನಿಡಿ-1ರ ಸಾಕ್ಷಿ ನನ್ನ ತಂದೆಗೆ ಪರಿಚಯ, ನನಗೆ ಪರಿಚಯವಿಲ್ಲ. ನಿಡಿ-2ರಲ್ಲಿ ಪೂರ್ವ ಹಾಗೂ ಉತ್ತರದ ಚಕ್ಕುಬಂದಿ 2007ರಲ್ಲಿದ್ದ ಚಕ್ಕುಬಂದಿಗೆ ತಾಳೆಯಾಗುವುದಿಲ್ಲ ಎಂದರೆ ಸಾಕ್ಷಿಯು ಇರುವುದನ್ನು ನಮೂದು ಮಾಡಿದ್ದಾರೆ ಎಂದು ನುಡಿಯುತ್ತಾರೆ. ವೆಂಕಟೇಶ್ ರವರು ಅಗ್ರಿಮೆಂಟ್ ಆಧಾರದ ಮೇಲೆ 6ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿದರೆಂದು ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು ಈ ದಾವೆ ಸಲ್ಲಿಸಿದ ಮೇಲೆ ಗೊತ್ತಾಯಿತು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಮೊದಲೇ ಗೊತ್ತಿತ್ತು. ಅಂದರೆ ನನ್ನ ತಂದೆಗೆ ದಿನಾಂಕ 01.01.2011ಕ್ಕೂ ಮುಂಚೆ ಗೊತ್ತಾಯಿತಾ ಅಥವಾ ನಂತರವಾ ಎಂದು ನನಗೆ ಗೊತ್ತಿಲ್ಲ. ನಿಡಿ-1 ಮತ್ತು ನಿಡಿ-2ನ್ನು ನಾವು, ನಮ್ಮ ತಂದೆ, ತಾಯಿ, ಅಣ್ಣ ದಿನಾಂಕ 01.01.2011ರ ನಂತರ ಬರೆದುಕೊಟ್ಟದ್ದು ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾವು ಮತ್ತು 5ನೇ ಪ್ರತಿವಾದಿ ಸೇರಿಕೊಂಡು ನಿಡಿ-1 ಮತ್ತು ನಿಡಿ-2ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

9. ನಿಡಿ-1ರಲ್ಲಿ ನಿಡಿ-2 ದಾಖಲೆ ಬಗ್ಗೆ ಹೇಳಿಲ್ಲ, ನಿಡಿ-2ರಲ್ಲಿ ನಿಡಿ-1 ದಾಖಲೆ ಬಗ್ಗೆ ಹೇಳಿಲ್ಲ ಎಂದರೆ ಇರಬಹುದು. ನಿಡಿ-2ರ ದಿನಾಂಕ 10.09.2014 ಎಂದರೆ ಸರಿ. ನಿಡಿ-1ರ ದಿನಾಂಕ 07.03.2007 ಎಂದರೆ ಸರಿ. ನಿಡಿ-2ನ್ನು ನಿಡಿ-1 ಆದ ಮೂರು ವರ್ಷಗಳ ನಂತರ ಮಾಡಿಕೊಟ್ಟಿದ್ದು, ಆ ಎರಡೂ ದಾಖಲೆಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಡಿ-1 ಮತ್ತು ನಿಡಿ-2ರ ಮೇಲೆ ಸೂಕ್ತ ಸ್ಟ್ಯಾಂಪ್ ಶುಲ್ಕ ಪಾವತಿಸಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ತಿಳುವಳಿಕೆ ಇಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ನ್ಯಾಯಾಲಯದ ಸಮಯದ ಅಭಾವದಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.